# ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆ , ಆಯುಕ್ತರ ಕಛೇರಿ, ನೃಪತುಂಗ ರಸ್ತೆ,ಬೆಂಗಳೂರು-560001

ಸಂಖ್ಯೆ:ಇ-ಆಡಳಿತ. ನಿ.ಹು.ಖಾ.ಹು& ಜೇ.ಪ.01/2022-23 ದಿನಾಂಕ:29.04.2022

::ಜ್ಞಾಪನ::

ವಿಷಯ: ವರ್ಗಾವಣಾ ತಂತ್ರಾಂಶದಲ್ಲಿ ಖಾಲಿ ಹುದ್ದೆ ಮಾಹಿತಿ ಮತ್ತು ಜೇಷ್ಠತೆ ಪಟ್ಟಿಗಳನ್ನು ಪರಿಶೀಲಿಸಿ ದೃಢೀಕರಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಜ್ಞಾಪನ ಸಂಖ್ಯೆ:ಸಿ3(4)ನಿ.ಹು.ಆ.ಪ.77/2020-21 ದಿನಾಂಕ:25.04.2022

*******************

ವಿಷಯಕ್ಕೆ ಸಂಬಂಧಸಿದಂತೆ 2021-22 ನೇ ಸಾಲಿಗೆ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲಾ ಸಹಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ನಿರ್ದಿಷ್ಟಪಡಿಸಿದ ಹುದ್ದೆಗಳಿಗೆ ಲಿಖಿತ ಪರೀಕ್ಷೆ ನಡೆಸುವ ಮೂಲಕ ಭರ್ತಿ ಮಾಡುವ ಸಂಬಂಧ ಪರಿಷ್ಕೃತ ವೇಳಾಪಟ್ಟಿಯನ್ನು ದಿನಾಂಕ:25.04.2022 ರಂದು ಹೊರಡಿಸಲಾಗಿದ್ದು, ಈ ಸಂಬಂಧ ಕೆಳಕಂಡಂತೆ ಅಗತ್ಯ ಕ್ರಮವಹಿಸಲು ಸೂಚಿಸಿದೆ.

1. ಶಾಲೆಗಳಲ್ಲಿ ದಿನಾಂಕ:01.02.2022 ರಿಂದ 01.05.2022 ರರೆಗೆ ನಿವೃತ್ತಿ, ಬಡ್ತಿ, ಮರಣ ಮತ್ತು ಇತರೆ ಕಾರಣಗಳಿಂದ ತೆರವಾಗಿರುವ ಖಾಲಿ ಹುದ್ದೆಗಳನ್ನು ತಂತ್ರಾಂಶದಲ್ಲಿ ಇಂದೀಕರಿಸಲು ಉಪನಿರ್ದೇಶಕರ ಲಾಗಿನ್‌ನಲ್ಲಿ ಅವಕಾಶವನ್ನು ಕಲ್ಪಿಸಲಾಗಿದ್ದು ಎಲ್ಲಾ ಖಾಲಿ ಹುದ್ದೆಗಳನ್ನು ಇಂದೀಕರಿಸುವುದು
   **Link: https://sts.karnataka.gov.in/TEACHERTRANSFER2020**

2. ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಹೊರಹೋಗುವವರ ಪಟ್ಟಿಯನ್ನು ಕೆಳಕಂಡಂತೆ ಲಾಗಿನ್‌ನಲ್ಲಿ ಪ್ರಕಟಿಸಿದ್ದು ಸದರಿ ಪಟ್ಟಿಗಳನ್ನು ಪರಿಶೀಲಿಸಿಕೊಳ್ಳುವುದು

   I. ದಿನಾಂಕ:30.06.2021 ರಲ್ಲಿದ್ದಂತೆ ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ ಗರಿಷ್ಠ ಸೇವೆಯಾದ 05 ವರ್ಷಗಳನ್ನು ಪೂರೈಸಿ ಶಾಲೆಗಳಲ್ಲಿ ಖಾಲಿ ಹುದ್ದೆಗಳು ಲಭ್ಯವಿಲ್ಲದ ಕಾರಣ ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ ಮುಂದುವರೆಯುತ್ತಿರುವವರ ಪಟ್ಟಿ
   II. ದಿನಾಂಕ:01.07.2021 ರಿಂಧ ದಿನಾಂಕ:07.12.2021ರ ವರೆಗೆ ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ ಗರಿಷ್ಠ ಸೇವೆಯಾದ 05 ವರ್ಷಗಳನ್ನು ಪೂರೈಸಿ ಹೊರ ಹೋಗುತ್ತಿರುವವರ ಪಟ್ಟಿ
   III. ಕೌನ್ಸಿಲಿಂಗ್ ಹೊರತುಪಡಿಸಿ ಸರ್ಕಾರದ ಆದೇಶದ ಮೇರೆಗೆ ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ ಮುಂದುವರೆಯುತ್ತಿರುವವರ ಪಟ್ಟಿ.

   **Link: https://sts.karnataka.gov.in/TEACHERTRANSFERCOUNSELLING**

3. ಪ್ರೌಢಶಾಲಾ ಮುಖ್ಯಶಿಕ್ಷಕರ ಹಾಗೂ ತತ್ಸಮಾನ ವೃಂದದ ಜೇಷ್ಠತೆ ಪಟ್ಟಿಯನ್ನು ಸಂಬಂಧಿಸಿದ ಪ್ರಾದಿಕಾರಿಗಳ ಲಾಗಿನ್‌ಗಳಿಗೆ ಬಿಡುಗಡೆ ಮಾಡಲಾಗಿದೆ.

ಮೇಲಿನಂತೆ ಎಲ್ಲಾ ವಿವರಗಳನ್ನು ಪರಿಶೀಲಿಸುವುದು ಹಾಗೂ ದಿನಾಂಕ:22.04.2022 ರಂದು ನಿರ್ದಿಷ್ಟಪಡಿಸಿದ ಹುದ್ದೆಗಳಿಗೆ ನಡೆದ ಕೌನ್ಸಿಲಿಂಗ್‌ನಲ್ಲಿ ಆಯ್ಕೆಯಾದವರ ಶಾಲಾ ಹುದ್ದೆಗಳು ತಂತ್ರಾಂಶದಲ್ಲಿ ಖಾಲಿ ಹುದ್ದೆಗಳಾಗಿ ಮಾರ್ಪಟ್ಟಿರುವ ಬಗ್ಗೆ ಖಚಿತಪಡಿಸಿಕೊಂಡ ನಂತರ ಯಾವುದಾದರು ತಿದ್ದುಪಡಿಗಳಿದ್ದಲ್ಲಿ ಸೂಕ್ತ ದಾಖಲೆಗಳ ಸಹಿತ ಆಕ್ಷೇಪಣೆಗಳನ್ನು Transfercellcpi@gmail.com ಇ-ಮೇಲ್ ವಿಳಾಸಕ್ಕೆ ದಿನಾಂಕ:04.05.2022ರ ಸಂಜೆ:05.30ರ ಒಳಗಾಗಿ ರವಾನಿಸುವುದು ಯಾವುದೇ ತಿದ್ದುಪಡಿಗಳು ಇಲ್ಲದೇ ಇದ್ದಲ್ಲಿ ಯಾವುದೇ ತಿದ್ದುಪಡಿಗಳು ಇಲ್ಲ ಎಂದು ದೃಢೀಕರಣವನ್ನು ರವಾನಿಸಲು ಸೂಚಿಸಿದೆ. ನಿಗದಿತ ದಿನಾಂಕದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

ರವರಿಗೆ,

ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ)ರವರಿಗೆ ತುರ್ತು ಕ್ರಮಕ್ಕಾಗಿ

ಪ್ರತಿ.

1. ಮಾನ್ಯ ಅಪರ ಆಯುಕ್ತರು, ಕಲಬುರ್ಗಿ, ಮತ್ತು ಧಾರವಾಡ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಜಂಟಿ ನಿರ್ದೇಶಕರು(ಆಡಳಿತ) ಆಯುಕ್ತರ ಕಛೇರಿ ಸಾ.ಶಿ.ಇ ಬೆಂಗಳೂರು ರವರಿಗೆ ಸೂಕ್ತ ಕ್ರಮಕ್ಕಾಗಿ